ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 12/12/2019

# ಶಾಸಕರ ತಾತ್ಸಾರ ಧೋರಣೆಗೆ ಅಸಮಾಧಾನ

12/12/19

ಸಂಕ ಸಮಾಚಾರ ರಾಮನಗರ

ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಬಂದಿದ್ದ ನಾಗರಿಕರ ಬಗ್ಗೆ ಶಾಸಕಿ ಅನಿತಾ ಕುಮಾರಸ್ವಾಮಿ ಅವರು ತಾತ್ಸಾರ ಧೋರಣೆ ತೋರಿದ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ಸಾರ್ವಜನಿಕರು ಮತ್ತು ಜೆಡಿಎಸ್ ಮುಖಂಡರ ನಡುವೆ ವಾಗ್ವಾದ ನಡೆದ ಪ್ರಸಂಗ ನಗರದಲ್ಲಿ ಜರುಗಿತು.

ರಾಮನಗರ ನಗರಸಭೆ ಕಚೇರಿಗೆ ಕ್ಷೇತ್ರದ ಶಾಸಕಿ ಅನಿತಾ ಕುಮಾರಸ್ವಾಮಿ ಅವರು ಬುಧವಾರ ಭೇಟಿ ನೀಡಿದ್ದ ಸಂದರ್ಭದಲ್ಲಿ ಹೈಡ್ರಾಮ ನಡೆಯಿತು. ಅಧಿಕಾರಿಗಳ ಸಭೆ ನಡೆಸಲು ಆಗಮಿಸಿದ್ದ ಶಾಸಕರನ್ನು ಬಹಳಷ್ಟು ನಾಗರೀಕರು ಇ-ಖಾತೆ ಮಾಡಿಕೊಡಲು ಅಧಿಕಾರಿಗಳು ವಿನಾಕಾರಣ ಅಲೆಸುತ್ತಿದ್ದಾರೆಂದು ದೂರಿನ ಸುರಿಮಳೆಗೈದರು. ಸಾವಧಾನದಿಂದ ಮನವಿ ಆಲಿಸಬೇಕಾದ ಶಾಸಕರು ಸಭೆ ಮುಗಿಸಿ ಬರ್ತೀನಿ ಎಂದು ತೆರಳಿದರು.

ಸಾರ್ವಜನಿಕರ ಸಮಸ್ಯೆಗೆ ಸಮಸ್ಯೆಗೆ ಸ್ಪಂದಿಸದೆ ಶಾಸಕರು ಅಲ್ಲಿಂದ ಹೊರ ನಡೆದರು. ಇದೇ ವೇಳೆ ವಿನಾಯಕನಗರದ ರಾಜು ಎಂಬುವರು ಗ್ಯಾಸ್ ಗೋಡೌನ್ ತೆರವಿಗೆ ಮಾಡಿದ ಮನವಿಗೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಅಲವತ್ತುಕೊಂಡು ಕಾಲಿಗೆ ಬಿದ್ದರು. ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡೋವರೆಗೂ ತಾವು ಮೇಲೇಳುವುದಿಲ್ಲ ಎಂದು ಪಟ್ಟು ಹಿಡಿದರು.



ಶಾಸಕಿ ಅನಿತಾ ಕುಮಾರಸ್ವಾಮಿ ಅವರು ತಾತ್ಸಾರ ಧೋರಣೆ ತೋರಿದ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ಸಾರ್ವಜನಿಕರು ಮತ್ತು ಜೆಡಿಎಸ್ ಮುಖಂಡರ ನಡುವೆ ವಾಗ್ವಾದ ನಡೆಯಿತು.

ಇದಕ್ಕೆ ಯಾವ ಪ್ರತಿಕ್ರಿಯ ನೀಡದ ಶಾಸಕರು ಕಾರು ಹತ್ತಿದರು. ಈ ಧೋರಣೆಯಿಂದ ಕೆರಳಿದ ರಾಜು ಎಂಬ ವ್ಯಕ್ತಿ ಶಾಸಕರ ಕಾರಿಗೆ ಅಡ್ಡಲಾಗಿ ಕುಳಿತರು. ಅವರನ್ನು ಇನ್ನೂ ಕೆಲವು ನಾಗರಿಕರು ಅನುಸರಿಸಿ ಕಾರಿಗೆ ಅಡ್ಡ ಕುಳಿತು ಪ್ರತಿರೋಧ ವ್ಯಕ್ತಪಡಿಸಿದರು.